ಸರಕಾರದಲ್ಲಿ ಭಾಗವಹಿಸಲು ನಿರಾಕರಿಸುವ ಬುದ್ಧಿಶಾಲಿಗಳಿಗೆ ಸಿಗುವ ದಂಡನೆ ಎಂದರೆ ಕೇಡುಗಮೊಬ್ಬನ ಸರಕಾರದಡಿಯಲ್ಲಿ ನರಳುವುದು.

**– ಪ್ಲಾಟೊ**

**ಐ ವಾಚ್**

**ಭಾರತದ ಪರಿವರ್ತನೆಗಾಗಿ ಪ್ರಜಾ ಚಳುವಳಿ**

**ಮಾನವ ಸಂಪನ್ಮೂಲ**

**ಉದ್ಯಮದ**

**ಅರ್ಥವ್ಯವಸ್ಥೆ**

ಆರ್ಥಿಕ ಪ್ರಾಬಲ್ಯ ಇರುವ ಹಾಗೂ
ಅಭಿವೃದ್ಧಿಹೊಂದಿದ ರಾಷ್ಟ್ರವಾಗಿ

# ಭಾರತವನ್ನು ಪರಿವರ್ತಿಸುವುದು

**ಶಿಕ್ಷಣ ಮತ್ತು ತರಬೇತಿ**

**ಆಡಳಿತೆಯಲ್ಲಿ**

**ನೇತೃತ್ವಕ್ಕಾಗಿ**

"ಕಳೆದ 57 ವರ್ಷಗಳಲ್ಲಿ, 194ರ ನಂತರ ನಮ್ಮಲ್ಲಿ ನಡೆದ ಹೆಚ್ಚಿನ ಅಭಿವೃದ್ಧಿ ಕಾರ್ಯಗಳು, ಭಾರತದ ಜನಸಂಖ್ಯೆಯ ಕೇವಲ 20 ಕೋಟಿಯತ್ತವೇ ಗುರಿ ಇರಿಸಿತ್ತೆಂದು ವ್ಯಕ್ತವಾಗುತ್ತಿದೆ. ಇದನ್ನು ಬದಯಿಸುವ ಅಗತ್ಯವಿದೆ. ಯಾಕೆಂದರೆ ಉಳಿದ 90 ಕೋಟಿ ಭಾರತದ ಪ್ರಜೆಗಳಿಗೆ ಈ ಪ್ರಯೋಜನ ಸಿಗದಿದ್ದಲ್ಲಿ ನಮ್ಮ ದೇಶವು ಅಭವೃದ್ಧಿ ಹೊಂದಿದ ರಾಷ್ಟ್ರವಾಗಿ ಮುಂದೆ ಬರುವುದು ಸಾಧ್ಯವಿಲ್ಲ.

**– ಐ ವಾಚ್**

# ಅಮರ ಸ್ಫೂರ್ತಿ



ಭಾರತವು ಒಂದು ರಾಷ್ಟ್ರವಾಗ ಬೇಕೆಂದು ಬಯಸಿದ
**ರಬೀಂದ್ರನಾಥ ಟಾಗೋರ**

*“ಎಲ್ಲಿ ಮನಕಳುಕಿರದೂ, ಎಲ್ಲಿ ತಲೆಬಾಗಿರದೊ;*
*ಎಲ್ಲಿ ಅರಿವಿಗೆ ಬೆಲೆ ತೆರಬೇಕಾಗಿಲ್ಲವೊ;*
*ಎಲ್ಲಿ ಈ ವಿಶ್ವವು ಖಂಡತುಂಡವಾಗಿ ಒಡೆಯದಿರುವುದೊ*
*ಮನೆ ಮನೆಯ ಕಿರುಗೋಡೆಗಳಿಂದ;*
*ಎಲ್ಲಿ ವಿಶ್ವವು ಉದಿಸುವುದೊ ಸತ್ಯದಾಳದಿಂದ;*
*ಎಲ್ಲಿ ದಣಿವರಿಯದ ತೋಳುಗಳು ಸಂಪೂರ್ಣತೆಯತ್ತ ಚಾಚಿವೆಯೊ;*
*ಎಲ್ಲಿ ಭಯಾನಕ ಮರಳುಗಾಡಿನಲ್ಲಿ ವಿಚಾರ ರಶ್ಮಿಯ ಸ್ಪಷ್ಟ ಅರಿವು ಸತ್ತಿಲ್ಲವೊ*
*ಎಲ್ಲಿ ಮನ, ವಿಸ್ತರವಾದ ವಿಚಾರ ಮತ್ತು ಯತ್ನಗಳತ್ತ ನಿನ್ನ ಮುನ್ನಡೆಸುವುದೊ*
*ಆ ಸ್ವಾತಂತ್ರ್ಯದ ಸಗ್ಗಕೆ, ನನ್ನ ದೇವರೆ, ನನ್ನ ದೇಶವನೊಯ್ಯು”*

ಆಕರ: ಗೀತಾಂಜಲಿ, ಪದ್ಯ XXXV.

# ಐ ವಾಚ್‌ನ ಬಗ್ಗೆ

“ಭಾರತದ ಪರಿವರ್ತನೆ”ಗಾಗಿ ಮೀಸಲಾದ ರಾಷ್ಟ್ರೀಯ ಪ್ರಜಾ ಆಂದೋಲನವೇ **ಐ ವಾಚ್** ಆಗಿದೆ. ‘ಐ’ ಎಂದರೆ ಇಂಡಿಯಾ, ಇಂಡಿಯನ್‌ಗಳು ಅಂದರೆ ನೀವು ಮತ್ತು ನಾನು. ‘**ವಾಚ್**’ ಅಂದರೆ ನಾವು, ದೇಶದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಪಹರೆಯಂತೆ ‘ಗಮನಿಸುತ್ತೇವೆ, ಹಾಗೂ ಇದನ್ನು ಭಾರತದ ನಾಗರಿಕರಿಗೆ, ಅವರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಹಾಗೂ ಸುಧಾರಣೆಗಳನ್ನು ತರುವುದಕ್ಕಾಗಿ ಅವರಿಗೆ ವರದಿ ಮಾಡುತ್ತೇವೆ. ಐ ಇಲ್ಲಿ ಸಣ್ಣದು. ಯಾಕೆಂದರೆ ಕೇವಲ ನಮ್ರ ಭಾವದಿಂದಷ್ಟೆ ನಾವು ಸತ್ಯವನ್ನು ಪರಿಗ್ರಹಿಸಬಹುದು ಎನ್ನುವುದನ್ನು ನಮಮಥ ಗುರುಗಳು ನಮಗೆ ಯಾವಾಗಲೂ ಕಲಿಸುತ್ತಿದ್ದರು. **ಐ ವಾಚ್** ಒಂದು ನೋಂದಾಯಿತ ಧರ್ಮಾರ್ಥ ಸಂಸ್ಥೆಯಾಗಿದ್ದು ಇದರ ಪ್ರಧಾನ ಕಛೇರಿ ಮುಂಬಯಿಯಲ್ಲಿದೆ. **ಐ ವಾಚ್**‌ಗೆ ನೀಡುವ ದೇಣಿಗೆ, ಆದಾಯಕರ ವಿದೇಯಕ 80Gಯ ಅಂತರ್ಗತ ಕರಲಾಭಗಳಿಗೆ ಅರ್ಹವಾಗುತ್ತದೆ. ಚೆಕ್‌ಗಳನ್ನು ಈ ವಿಳಾಸಕ್ಕೆ ಕಳಿಸಬಹುದು: **ಐ ವಾಚ್**, 211, ಒಲಿಂಪಸ್, ಅಲ್ಟಾಮೌಂಟ ರೋಡ್, ಮುಂಬಯಿ 400 026.

# ಅರ್ಪಣೆ

ಈ ಕಿರುಹೊತ್ತಿಗೆಯನ್ನು 35 ವರ್ಷ ಪ್ರಾಯಗಳಿಗಿಂತ ಕಡಿಮೆ ವಯಸ್ಸಿನ 76 **ಕೋಟಿ ಭಾರತೀಯ** ಯುವ ಜನರಿಗೆ ಅರ್ಪಿಸಲಾಗಿದೆ !

# ಲೇಖರರ ಬಗ್ಗೆ

**ಐ ವಾಚ್** ಸಂಸ್ಥಾಪಕ ವಿಶ್ವಸ್ತರಾದ ಕ್ರಿಶನ್ ಖನ್ನಾರವರು ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಪದವಿ ಪಡೆದ ಐಐಟಿ ಖರಗ್‌ಪುರ್‌ನ, 1961ನೆ ಬ್ಯಾಚ್‌ನ ಸ್ನಾತಕರಾಗಿದ್ದಾರೆ. ಬಿಸಿನೆಸ್, ಉದ್ಯಮ, ಮ್ಯಾನೇಜ್‌ಮೆಂಟ್ ಹಾಗೂ ಅಧ್ಯಾಪನ ವೃತ್ತಿಯಲ್ಲಿ 44 ವರ್ಷಗಳ ಅನುಭವ ಇರುವ ಇವರು ಒಬ್ಬ ಟೆಕ್ನೊಕ್ರಾಟ್ (ತಂತ್ರಜ್ಞಾನ ಪಡೆದ ಉದ್ಯಮಿ) ಆಗಿದ್ದಾರೆ. ಭಾರತದಾದ್ಯಂತ ಹಾಗೂ 5 ಖಂಡಗಳಲ್ಲಿ ಸಾಕಷ್ಟು ಬಾರಿ ಸಂಚರಿಸಿದ ಇವರು ಯುಎಸ್‌ಎ, ಕೆನಡಾ, ಬ್ರೆಜಿಲ್, ಯುಕೆ, ಸ್ವೀಡನ್, ಜರ್ಮನಿ, ಇಟಲಿ, ಇರಾನ್, ಚೀನಾ, ಕೊರಿಯಾ, ತೈವಾನ್, ಸಿಂಗಾಪುರ, ಜಪಾನ್ ಮತ್ತು ಆಸ್ಟ್ರೇಲಿಯಾದ ಸಂಸ್ಥೆಗಳೊಂದಿಗೆ ಹದಿನಾಲ್ಕು ಜಂಟೀ ಉದ್ಯಮಗಳನ್ನು/ಬಿಸಿನೆಸ್‌ಗಳನ್ನು ಕುದುರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಜರ್ಮನಿ ಮತ್ತು ಜಪಾನ್‌ಗಳಲ್ಲಿ ಸುಮಾರು 6 ವರ್ಷ ಇವರು ದುಡಿದಿದ್ದಾರೆ. 1966ರಲ್ಲಿ ಭಾರತದ ಪ್ರಧಾನಿಯವರಿಂದ ರಾಷ್ಟ್ರೀಯ ನಾಗರಿಕ ಪುರಸ್ಕಾರವನ್ನು ಇವರು ಪಡೆದಿದ್ದಾರೆ 1992ರಲ್ಲಿ ಇವರು ತಮ್ಮ ವೃತ್ತಿ ನಿರತ ಹಾಗೂ ಬಿಸಿನೆಸ್ ವ್ಯವಹಾರಗಳನ್ನು ನಿಲ್ಲಿಸಿ, ರಾಷ್ಟ್ರ ನಿರ್ಮಾಣ ಮತ್ತು ಭಾರತ ಪರಿವರ್ತನೆಯ ಕಾರ್ಯದಲ್ಲಿ ನಿರತರಾಗಿದ್ದಾರೆ.



# ಪರಿವಿಡಿ


| | ಲೇಖನದ ವರ್ಗೀಕರಣ | ಪುಟ ಸಂಖ್ಯೆ |
|---|---|---|
| 1. ನಿಮಗೆ ಗೊತ್ತಿಲ್ಲದ ಭಾರತ | (ಆಡಳಿತ) | 4 & 5 |
| 2. ಭಾರತವನ್ನು ಪರಿವರ್ತಿಸುವುದು– ಪರಿವರ್ತನೆಗೆ ಕಾರ್ಯಸೂಚಿ | (ಆಡಳಿತ) | 6 |
| 3. ಪೀಠಿಕೆ, ನಿಯೋಜಿತ ಉದ್ದೇಶ ಮತ್ತು ಲಕ್ಷ್ಯ | (ನೇತೃತ್ವ) | 7 |
| 4. ಆರ್ಥಿಕ ಹಾಗೂ ಬಿಸಿನೆಸ್ (ವ್ಯವಹಾರ) ಸುಧಾರಣೆಗಳು | (ನೇತೃತ್ವ) | 8 |
| 5. ರಾಜ್ಯಭಾರ ಮತ್ತು ಭಾರತದ ಆಡಳಿತೆ | (ನೇತೃತ್ವ) | 9 |
| 6. ಭಾರತ ಒಂದು ರಾಷ್ಟ್ರವಾಗಿ | (ನೇತೃತ್ವ) | 10 |
| 7. ಮಾನವ ವಿಕಾಸ, ಪ್ರತ್ಯೇಕ ರೀತಿಯಲ್ಲಿ | (ಮಾನವ ವಿಕಾಸ) | 11 |
| 8. ಪ್ರಾಥಮಿಕ ಶಿಕ್ಷಣ ಮತ್ತು 100% ಕಾರ್ಯಕಾರೀ ಸಾಕ್ಷರತೆ | (ಮಾನವ ವಿಕಾಸ) | 12 |
| 9. ವೃತ್ತಿಪರ ಶಿಕ್ಷಣ ಮತ್ತು ತರಬೇತಿ– ಭಾರತದ ನಿಜವಾದ ವಿಜಯಶಾಲಿ | (ಮಾನವ ವಿಕಾಸ) | 13 |
| 10. ಔದ್ಯೋಗಿಕ ಪರಿಣತಿಯ ವಿಕಾಸ ಹಾಗೂ ವೃತ್ತಿಪರ ಶಿಕ್ಷಣದ ಪ್ರಯೋಜನಗಳು | (ಮಾನವ ವಿಕಾಸ) | 14 |
| 11. ಭಾರತದಲ್ಲಿ ಶಿಕ್ಷಣ ಮಟ್ಟ | (ಮಾನವ ವಿಕಾಸ) | 15 |
| 12. ಮಾನವ ಸಂಪನ್ಮೂಲ ವಿಕಾಸ (ಎಚ್‌ಆರ್‌ಡಿ)– ಉದ್ಯೋಗ ಮತ್ತು ನಿರುದ್ಯೋಗ | (ಮಾನವ ವಿಕಾಸ) | 16 |
| 13. ಭಾರತದ 'ಉದ್ಯೋಗ ಮಟ್ಟ' | (ಮಾನವ ವಿಕಾಸ) | 17 |
| 14. ಸ್ಫೋಟಗೊಳ್ಳುವ ಮೊದಲೇ ಕ್ರಿಯಾರಹಿತವಾಗಿಸಬೇಕಾದ ಜನಸಂಖ್ಯಾ ಬಾಂಬ್ | (ಮಾನವ ವಿಕಾಸ) | 18 & 19 |
| 15. ಉತ್ತಮ ರಾಜ್ಯಭಾರ ಭಾರತವನ್ನು ಸೂಪರ್ ಪವರ್ ಆಗಿ ಪರಿವರ್ತಿಸಬಲ್ಲುದು | (ರಾಜ್ಯಭಾರ) | 20 |
| 16. ಉತ್ತಮ ರಾಜ್ಯಭಾರ– + ಪರಿಣಾಮಕಾರಿ ಆಡಳಿತ = ಶೂನ್ಯ ಲಂಚ | (ರಾಜ್ಯಭಾರ) | 21 |
| 17. ವಿಶ್ವದರ್ಜೆಯ ರಾಜ್ಯಭಾರ– ಭಾರತವು ಯಾಕೆ ಹಾಗೂ ಹೇಗೆ ಮಾಡತಕ್ಕದ್ದು? | (ರಾಜ್ಯಭಾರ) | 22, 23 & 24 |
| 18. ಭಾರತಕ್ಕೆ ಏಕೈಕ ಮಾರ್ಗದ ಕಾರ್ಯ ಸೂಚಿ | (ರಾಜ್ಯಭಾರ) | 25 |
| 19. ವಾಸ್ತವವಾಗಿರುವ ಹಾಗೂ ನಿಜವಾಗಬಲ್ಲ ಭಾರತ | (ಆರ್ಥಿಕ ಮತ್ತು ಉದ್ಯಮ) | 26 |
| 20. ದಾರಿದ್ರ್ಯ ರೇಖೆ ಮತ್ತು ಭಾರತಕ್ಕೆ ಇದರ ಸಂಬಂಧ | (ಆರ್ಥಿಕ ಮತ್ತು ಉದ್ಯಮ) | 27 |
| 21. ಜಾಗತಿಕ ಮಾರುಕಟ್ಟೆಗಾಗಿ ಹೇಗೆ ಹಂಚಿಕೆ ಹೂಡುವುದು? ಒಂದು ಪರಿವೀಕ್ಷಣಾ ಯಾದಿ | (ಆರ್ಥಿಕ ಮತ್ತು ಉದ್ಯಮ) | 28 |
| 22. ಸಣ್ಣ ಮತ್ತು ಮಧ್ಯಮ ಸ್ವರೂಪದ ಉದ್ದಿಮೆಗಳ (ಎಸ್‌ಎಮ್‌ಇ) ಸ್ವರೂಪ | (ಆರ್ಥಿಕ ಮತ್ತು ಉದ್ಯಮ) | 29 |
| 23. ಭಾರತವು ಅಂತರ್ರಾಷ್ಟ್ರೀಯ ಚಟುವಟಿಕೆಗಳ ಜೇನುಗೂಡಾಗ ಬೇಕು | (ಆರ್ಥಿಕ ಮತ್ತು ಉದ್ಯಮ) | 30 |
| 24. ಎಸ್‌ಎಂಇಗಳ ಮಹತ್ವ | (ಆರ್ಥಿಕ ಮತ್ತು ಉದ್ಯಮ) | 31 |
| 25. ಚೀನಾ–ಭಾರತ ಹೋಲಿಕೆಯ ತಖ್ತೆ, ಸಾಧ್ಯವಾದಲ್ಲಿ ನನ್ನನ್ನು ಮುಟ್ಟು! | (ಆರ್ಥಿಕ ಮತ್ತು ಉದ್ಯಮ) | 32 |
| 26. ಆಯ್ದ ದೇಶಗಳೊಂದಿಗೆ ಹೋಲಿಕೆ | (ಆರ್ಥಿಕ ಮತ್ತು ಉದ್ಯಮ) | 33 |
| 27. ಓದುಗರಿಗಾಗಿ | (ಸಾಮಾನ್ಯ) | 34 & 35 |
| 28. ಜಿಡಿಪಿ ವೃದ್ಧಿ 10% ನಿಂದ 14% ವಾರ್ಷಿಕವಾಗಿ ತಲುಪಲು ಕಾರ್ಯ ಯೋಜನೆ | (ಸಾಮಾನ್ಯ) | ಹೊದಿಕೆಯ ಹಿಂದೆ |


ಹೊದಿಕೆಯ ಡಿಸ್ಯಾನ್: "**ಫ್ರಮ್ ಡಾರ್ಕ್‌ನೆಸ್ ಟು ಲೈಟ್**" (**ಕತ್ತಲಿಂದ ಬೆಳಕಿನೆಡೆಗೆ**)ನ ಕೇಂದ್ರ ವಿಷಯ.

ಆರ್ಥಿಕ ಪ್ರಾಬಲ್ಯವುಳ್ಳ ಹಾಗೂ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ

# ಭಾರತವನ್ನು ಪರಿವರ್ತಿಸುವುದು

ಪರಿವರ್ತನೆಗೆ ಕೈಗೊಳ್ಳಬೇಕಾದ ಕಾರ್ಯ ಯೋಜನೆಗಳ ಬಗ್ಗೆ ನಮ್ಮ ಸಲಹೆಗಳು

## ಆದ್ಯತೆ 1- ಯೋಗ್ಯವಾದ ಎಚ್‌ಆರ್‌ಡಿ, ಶಿಕ್ಷಣ ಮತ್ತು ತರಬೇತಿ

1. **100% ಕ್ರಿಯಾ ಶಾಲಿಯಾದ ಪ್ರಾಥಮಿಕ ಸಾಕ್ಷರತೆ:** ಯಾವುದೇ ಒಂದು ಭಾರತೀಯ ಭಾಷೆಯನ್ನು ಓದುವ ಮತ್ತು ಬರೆಯುವುದನ್ನು ಪ್ರತಿದಿನ 1 ಗಂಟೆಯಂತೆ ವಾರದ 5 ದಿನಗಳಲ್ಲಿ ಕಲಿಯುವುದು. ಸುಮಾರು 50 ಕೋಟಿ ಜನರು 3 ಆರ್ ಗಳನ್ನು (ಓದುವುದು, ಬರೆಯುವುದು ಮತ್ತು ಗಣಿತ) ಕಲಿಯಬೇಕಾಗಿದೆ.
2. **ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ:** *ಶಾಲೆಗಳನ್ನು ತೊರೆಯುವ ಪ್ರಮಾಣವನ್ನು 94%-ನ್ನು 10% ಕ್ಕಿಂತಲೂ ಕಡಿಮೆ ಮಟ್ಟಕ್ಕೆ ಇಳಿಸಬೇಕಾಗಿದೆ.*
3. **ಉದ್ಯಮ ನೈಪುಣ್ಯದ ವಿಕಾಸ ಅಥವಾ ಇಎಸ್‌ಡಿ (ಎಂಟರ್‌ಪ್ರೈಸ್ ಸ್ಕಿಲ್ಸ್ ಡೆವಲಪ್‌ಮೆಂಟ್):** ಇದು 1ನೆಯ ಇಯತ್ತೆಯಲ್ಲೆ ಆರಂಭವಾಗಿ 12ನೇ ಇಯತ್ತೆಯ ವರೆಗೂ ಇರಬೇಕೆಂಬುದು ನಮ್ಮ ಸಲಹೆ. ಇಎಸ್‌ಡಿ ಎನ್ನುವುದು **ಉದ್ಯಮಗಳು ಹಾಗೂ ವಾಸ್ತವ ಜಗತ್ತು ಹೇಗೆ ಕೆಲಸ ಮಾಡುತ್ತದೆ** ಎನ್ನುವ ಕುರಿತಾಗಿದೆ. *ಯುವ ಜನತೆಗೆ ನೀಡುವ ಸಹಾಯಗಳು ಅವರ ಭವಿಷ್ಯದ ವೃತ್ತಿಯ ಆಯ್ಕೆಯನ್ನು ಸುಗಮಗೊಳಿಸುತ್ತವೆ. ವ್ಯಕ್ತಿಯಲ್ಲಿ ಆತ್ಮವಿಶ್ವಾಸವನ್ನು ಬೆಳೆಸುತ್ತದೆ.* ವಾರಕ್ಕೆ ಕೇವಲ ಎರಡು ಗಂಟೆಗಳು ಇದಕ್ಕೆ ಬೇಕಾಗುತ್ತವೆ.
4. **ವೊಕೇಶನಲ್ ಎಡುಕೇಶನ್ ಆ್ಯಂಡ್ ಟ್ರೈನಿಂಗ್ (ವಿಇಟಿ, ವೃತ್ತಿಪರ ಶಿಕ್ಷಣ ಮತ್ತು ತರಬೇತಿ):** ವಿಇಟಿ ಯುವಕರಿಗೆ ***ನೈಪುಣ್ಯ*** ವೊಂದನ್ನು ಅಥವಾ ***ದಕ್ಷತೆ*** ಯೊಂದನ್ನು ಅಥವಾ ವೃತ್ತಿಯೊಂದನ್ನು ಕಲಿಸುತ್ತದೆ. ನೈಪುಣ್ಯವಿರುವ ಕೆಲಸಗಳನ್ನು ಮೊಡಲು ವ್ಯಕ್ತಿ ಕಲಿಯುತ್ತಾನೆ! ಅಭಿವೃದ್ಧಿಹೊಂದಿದ ರಾಷ್ಟ್ರಗಳಲ್ಲಿ 95% ಯುವಕರು ವಿಇಟಿಯನ್ನು ಆರಿಸುತ್ತಾರೆ. ಜಗತ್ತಿನ ಜಿಡಿಪಿಯ 1.5% ಆದ ಐಟಿಯನ್ನು ಹೊರತುಪಡಿಸಿ, ಭಾರತದಲ್ಲಿ 50,000 ತರಬೇತಿ ಕೇಂದ್ರಗಳು ಕಾರ್ಯಪ್ರವೃತ್ತವಾಗಿರಬಹುದು.
5. **ಶಿಕ್ಷಣದ ಉದಾರೀಕರಣ:** ಶಿಕ್ಷಣಕ್ಕಿರುವ ಎಲ್ಲ ನಿಯಂತ್ರಣಗಳನ್ನೂ ಕಿತ್ತು ಹಾಕಿ, ಅದನ್ನು ಖಾಸಗೀಕರಣಗೊಳಿಸಬೇಕು. ಭಾರತವು ಶಿಕ್ಷಣದ ಮಟ್ಟಿಗೆ ಜೇನುಗೂಡಿನಂತಾಗಬೇಕು.
6. **ಶಿಕ್ಷಣದಲ್ಲಿ ಖಾಸಗಿ ಹಾಗೂ ಅನಿವಾಸಿ ಭಾರತೀಯರ (ಎನ್‌ಆರ್‌ಐ) ಭಾಗವಹಿಸುವಿಕೆ:** ಸರಕಾರವು ಪ್ರೌಢಶಾಲಾ ಶಿಕ್ಷಣದ ತನಕ ಮಾತ್ರ ತನ್ನ ಗಮನವನ್ನು ಕೇಂದ್ರೀಕರಿಸಬೇಕು.
7. **ಪ್ರತಿಯೊಂದು ಬ್ಲಾಕ್‌ನಲ್ಲೂ ಉದ್ಯಮ ಶೀಲತೆ ಬೆಳೆಸುವ ಸಂಸ್ಥೆಗಳು:** ರಾಜ್ಯಗಳ ಎಲ್ಲ ಬ್ಲಾಕ್‌ಗಳಲ್ಲೂ ಉದ್ಯಮಶೀಲತೆ ಬೆಳೆಸುವ ಸಂಸ್ಥೆಗಳಿರಬೇಕು. *ಎಸ್‌ಎಮ್‌ಇ ಮತ್ತು ಸಂಘಟಿತಗೊಳ್ಳದ ಕ್ಷೇತ್ರಗಳಲ್ಲಿ 97% ಹೊಸ ಉದ್ಯೋಗಾವಕಾಶಗಳಿವೆ. ಯುವಕರಿಗೆ ಬೇಕಾದ ನೈಪುಣ್ಯವನ್ನು ನಾವು ಕೊಡಬೇಕು.*

## ಆದ್ಯತೆ 2- ಕೇಂದ್ರ ಸರಕಾರದ ನೀತಿಯಲ್ಲಿ ಬದಲಾವಣೆಗಳು

1. ಎಸ್‌ಎಸ್‌ಐ (ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್, ಸಣ್ಣ ಕೈಗಾರಿಕೆಗಳು)ಯಲ್ಲಿ *ಮೀಸಲಾತಿ ತೊಲಗಿಸುವುದು. ಮೀಸಲಾತಿಯಿಂದ ಒಳ್ಳೆಯದಾವುದಕ್ಕಿಂತ ಕೆಟ್ಟದಾಗುವುದೇ ಹೆಚ್ಚು.*
2. '**ಕಾರ್ಮಿಕ/ನೌಕರರ ಕಾನೂನು**'ಗಳಿಗೆ ತಿದ್ದುಪಡಿ ತರುವುದು, ಹಾಗೂ *ಸ್ಥಳೀಯ ಉದ್ಯಮ ಮತ್ತು ಸಂಸ್ಥೆಗಳಿಗೆ ಸಮಾನಾವಕಾಶ ನೀಡುವುದು.*
3. **ಉದ್ಯೋಗ ನಿರ್ಮಿತಿಗಾಗಿ** *ಕಾರ್ಮಿಕಪರ ತಂತ್ರಜ್ಞಾನಗಳಿಗೆ ಉತ್ತೇಜನ ನೀಡುವುದು.*
4. **ಎಸ್‌ಎಮ್‌ಇಗಳ ಅರ್ಥವ್ಯಾಪ್ತಿ ಮತ್ತು ಮಹತ್ವವನ್ನು** ಗುರುತಿಸುವುದೇ ಹೊರತು ಎಸ್‌ಎಸ್‌ಐಗಳನ್ನಲ್ಲ ಎಸ್‌ಎಮ್‌ಇಯಲ್ಲಿ 'ಎಸ್' ಮತ್ತು 'ಇ'ಯ ಪಾಲು 90% ಇದ್ದರೆ ಎಸ್‌ಎಸ್‌ಐಯ ಕೇವಲ 7% ಭಾರತ ಸರಕಾರ, ಹಣಕಾಸು ಸಂಸ್ಥೆಗಳು ಹಾಗೂ ವ್ಯಾಪಾರ ವ್ಯವಹಾರದ ಸಂಘಟನೆಗಳು ಕೂಡಾ ಇದನ್ನು ಗುರುತಿಸಿ ತಿಳಿದುಕೊಳ್ಳಬೇಕಾಗಿದೆ.

## ಆದ್ಯತೆ 3- ಸಾಫ್ಟ್‌ವೇರ್ ಹೊರತುಪಡಿಸಿ, ಆರ್ಥಿಕ ಕ್ಷೇತ್ರದ ನಿರ್ಯಾತ ಚಟುವಟಿಕೆಗಳು

1. **ರಖಮು ಮತ್ತು ಚಿಲ್ಲರೆ ಮಾರಾಟವು** ಐಟಿ (ಉದ್ಯೋಗ ನೀಡುವ ದೊಡ್ಡ ಕ್ಷೇತ್ರ ಹಾಗೂ ಜಿಡಿಪಿ ಸೃಷ್ಟಿಕರ್ತ)ಗಿಂತ 20 ಪಟ್ಟು ದೊಡ್ಡದಿದೆ.
2. ಉದ್ಯಮವಾಗಿ **ಉತ್ಪಾದನಾಕ್ಷೇತ್ರವು** ಐಟಿಗಿಂತ 18 **ಪಟ್ಟು** ದೊಡ್ಡದಿದೆ (ಸರಕಾರದ ಬೊಕ್ಕಸದ 75% ನಷ್ಟು ಇದು ತುಂಬಿಸುತ್ತದೆ).
3. **ಆರೋಗ್ಯ ಆರೈಕೆಯು** ಐಟಿಗಿಂತ 5 **ಪಟ್ಟು** ದೊಡ್ಡದಿದೆ (ಉದ್ಯೋಗ ಮತ್ತು ಜಿಡಿಪಿ ಉತ್ಪಾದಕ)
4. **ಪರ್ಯಾಟನೆ ಮತ್ತು ಪ್ರವಾಸವು** ಒಂದು ಉದ್ಯಮವಾಗಿ ಐಟಿಗಿಂತ 9 **ಪಟ್ಟು** ದೊಡ್ಡದಿದೆ. (ದೊಡ್ಡ ಉದ್ಯೋಗ ಮತ್ತು ಜಿಡಿಪಿ ಉತ್ಪಾದಕ)
5. **ಶಿಕ್ಷಣ ಕ್ಷೇತ್ರವು** ಒಂದು ಉದ್ಯಮವಾಗಿ ಐಟಿಗಿಂತ 5 **ಪಟ್ಟು** ದೊಡ್ಡದಿದೆ. (ದೊಡ್ಡ ಉದ್ಯೋಗ ಮತ್ತು ಜಿಡಿಪಿ ಉತ್ಪಾದಕ). ಐಟಿ ಮತ್ತು ಸಾಫ್ಟ್‌ವೇರ್ ಜಗತ್ತಿನ ಜಿಡಿಪಿಯ 1.5% ನಷ್ಟಿದೆ. ನಾವು ಉಳಿದ 98.5% ಆರ್ಥಿಕ ಕ್ಷೇತ್ರದತ್ತ ನಮ್ಮ ಲಕ್ಷ್ಯ ಹರಿಸಬೇಕಾಗಿದೆ. *ಮೇಲಿನ ಐದು ಆರ್ಥಿಕ ಚಟುವಟಿಕೆಗಳ ಕ್ಷೇತ್ರಗಳು, ಕೇವಲ ಉದಾಹರಣೆಗಾಗಿ ಇವೆ. ಹೀಗೆ ಇನ್ನೂ ಅನೇಕವಿವೆ.*

## ಆದ್ಯತೆ 4- ಮೂಲಭೂತ ಸೌಕರ್ಯಕ್ಕಾಗಿ ಹಣದ ಏರ್ಪಾಟು (500 ಬಿಲಿಯನ್ ಯುಎಸ್ ಡಾಲರುಗಳು)

*ಮೂಲಭೂತ ಸೌಕರ್ಯಕ್ಕಾಗಿ ವಾರ್ಷಿಕ 4% ನಿಂದ 6% ಬಡ್ಡಿ ದರದಲ್ಲಿ ಹಣ ಪಡೆದುಕೊಳ್ಳಬೇಕಾಗುತ್ತದೆ. ಸಾಲದ ಅವಧಿಯನ್ನು 10-15-20 ವರ್ಷಗಳ ತನಕ ವಿಸ್ತರಿಸಬೇಕಾಗುತ್ತದೆ.* ಯಾಕೆಂದರೆ, ನಿರ್ಮಾಣಕ್ಕಾಗಿ 5 ವರ್ಷಗಳು ತಗಲಿದರೆ, ಅದರ ಫಲಪ್ರಾಪ್ತಿ ಹಾಗೂ ಹಾಕಿದ ಹಣ ಹಾಗೂ ಸಿಕ್ಕಿದ ಹಣ ಅಲ್ಲಿಂದ ಅಲ್ಲಿಗೆ ಸಮನಾಗಲು ಮತ್ತೊಂದು 5 ವರ್ಷಗಳು ಬೇಕಾಗುತ್ತವೆ. ಈ ಬಾಂಡ್‌ಗಳಿಗೆ ಕಡಿಮೆ ಬಡ್ಡಿ ಇರಬೇಕು ಹಾಗೂ ಪ್ರೋತ್ಸಾಹನೆ ಮತ್ತು ಕರ ರಿಯಾಯಿತಿ ಇರಬೇಕಾಗುತ್ತದೆ.

## ಆದ್ಯತೆ 5- ನೇತೃತ್ವ ಮತ್ತು ಉತ್ತಮ ಆಡಳಿತ

*ನೇತೃತ್ವ ಮತ್ತು ಉತ್ತಮ ಆಡಳಿತದ ಪ್ರಯೋಜನಗಳನ್ನು ಹತ್ತು ವಿವಿಧ ಲೇಖನಗಳಲ್ಲಿ ವಿವರಿಸಲಾಗಿದೆ. ಪರಿವಿಡಿಯ ಪುಟವನ್ನು ನೋಡಿದಲ್ಲಿ, 70% ಲೇಖನಗಳು* '**ಜನಾವಲಂಬಿತ**' ವಾಗಿರುವುದು, ನಾಲ್ಕು ಲೇಖನಗಳು **ನೇತೃತ್ವದ** ಬಗ್ಗೆ ಇರುವುದು ಹಾಗೂ ಎಂಟು ಲೇಖನಗಳು **ಮಾನವ ಸಂಪನ್ಮೂಲ** ವಿಕಾಸದ ಬಗೆಗಿರುವುದು ವ್ಯಕ್ತವಾಗುತ್ತದೆ.

## ಆದ್ಯತೆ 6- ಮೇಲಿನ 5 ಆದ್ಯತೆಯ ವಿಷಯಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ

**ಟ್ರಾನ್ಸ್‌ಫಾರ್ಮಿಂಗ್ ಇಂಡಿಯಾ (ಭಾರತವನ್ನು ಪರಿವರ್ತಿಸುವುದು)** ಎನ್ನುವ ನಮ್ಮ 32-36 ಪುಟದ ಕಿರು ಹೊತ್ತಿಗೆಯ ಸಹಾಯದಿಂದ ಇದನ್ನು ಸಾಧಿಸಬಹುದು. ಅಗತ್ಯವಿರುವ ಪರಿಹಾರದೊಂದಿಗಿನ ಜನಜಾಗೃತಿ ಹಾಗೂ ಕೈಗೊಳ್ಳಬೇಕಾದ ಪ್ರಯತ್ನಗಳಿಗೆ ದಿಕ್ಸೂಚಿಯನ್ನು ಒದಗಿಸುವುದು ನಮ್ಮ ಮೂಲ ಉದ್ದೇಶವಾಗಿದೆ. ನಮ್ಮ ಕಿರುಹೊತ್ತಿಗೆ ಈ ಗುರಿಯನ್ನು ಗಮನದಲ್ಲಿರಿಸಿಕೊಂಡಿದೆ. **ನೇತೃತ್ವ ಆಡಳಿತವಿಧಾನ**, ಮಾನವ ಸಂಪನ್ಮೂಲ ವಿಕಾಸ, ಉದ್ಯಮ ಮತ್ತು ಆರ್ಥಿಕ ಕ್ಷೇತ್ರ- ಈ ವಿಷಯಗಳ ಕುರಿತು ಕಿರುಪುಸ್ತಿಕೆಯು 28 ಲೇಖನಗಳನ್ನು ಒಳಗೊಂಡಿದೆ. ನಮ್ಮ ವೆಬ್‌ಸೈಟ www.wakeu[call.org ಈ ಕಿರುಪುಸ್ತಿಕೆಯಲ್ಲಿ ಇರುವುದಕ್ಕಿಂತಲೂ ಹೆಚ್ಚಿನ ಮಾಹಿತಿಯನ್ನು ಮೈಗೂಡಿಸಿಕೊಂಡಿದೆ. ಈ ಸಂಬಂಧದ ಮುಖ್ಯ ವಿಷಯಗಳಲ್ಲಿ ಕೆಲವು **ಇಂಗ್ಲಿಷ್**, ಅಲ್ಲದೆ, **ಹಿಂದಿ, ಉರ್ದು, ಗುಜರಾತಿ, ಮರಾಠಿ, ತಮಿಳು, ತೆಲುಗು, ಕನ್ನಡ, ಮಲಯಾಳಮ್, ಬೆಂಗಾಲಿ, ಒರಿಯಾ, ಅಸ್ಸಾಮೀಸ್** ಮತ್ತು **ಪಂಜಾಬಿ** ಭಾಷೆಗಳಲ್ಲೂ ಲಭ್ಯವಿವೆ.